68

# ತಹಶೀಲ್ದಾರ್ ಸಂಡೂರು ಇವರ ನ್ಯಾಯಾಲಯ,

**ಉಪಸ್ಥಿತರು:–** ಶ್ರೀ.ಎಂ.ಚಂದ್ರಶೇಖರ, ತಹಶೀಲ್ದಾರರು, ಸಂಡೂರು.
**ವಾದಿಗಳು:–**(1)ಶ್ರೀ.ಲಿಂಗರಾಜ ಸಾಹುಕರ ತಂದೆ.ಶ್ರೀ.ಸಿದ್ರಾಮಪ್ಪ ಸಾಹುಕರ,ಸಂತೆ ಕಲ್ಲೂರು ಗ್ರಾಮ,ಲಿಂಗಸೂರು ತಾಲ್ಲೂಕು. (2)ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್, ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್. ಸಂಡೂರು

**ವಿರುದ್ಧ**

**ಪ್ರತಿವಾದಿ:–** ಕಂದಾಯ ನಿರೀಕ್ಷಕರು ಸಂಡೂರು.
**ಪೀಠಿಕೆ:–**

| ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಸಂಡೂರು | ಸಂಡೂರು | 18–ಹುಲಿಕುಂಟ | 215/P2<br>236/P21 | 6.50<br>0.50 |

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾದಿ–1 ಶ್ರೀ.ಲಿಂಗರಾಜ ಸಾಹುಕರ ತಂದೆ.ಶ್ರೀ.ಸಿದ್ರಾಮಪ್ಪ ಸಾಹುಕರ, ಸಂತೆ ಕಲ್ಲೂರು ಗ್ರಾಮ, ಲಿಂಗಸೂರು ತಾಲ್ಲೂಕು ಇವರ ಹೆಸರಿನಲ್ಲಿರುವ 18–ಹುಲಿಕುಂಟೆ ಗ್ರಾಮದ ಸ.ನಂ. 215/P2 ವಿಸ್ತೀರ್ಣ 6.50 ಮತ್ತು ಸ.ನಂ. 236/P21 ವಿಸ್ತೀರ್ಣ 0.50ಎಕರೆ ಜಮೀನುಗಳನ್ನು ಉಪನೊಂದಣಾಧಿಕಾರಿಗಳು, ಸಂಡೂರು ಇವರ ಡಾಕುಮೆಂಟ್ ಸಂ.172/2010–11 ದಿನಾಂಕ:04–06–2010 ರ ಪ್ರಕಾರ ವಾದಿ–2 ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್, ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್ ಸಂಡೂರು ಇವರು ಖರೀದಿಸಿದ ಭೂಮಿ ಸ್ವತ್ತಿನ ಸಂಖ್ಯೆ 2402/2015–16 ದಿನಾಂಕ:27–02–2016 ರ ತಿಳುವಳಿಕೆಚೀಟಿ ವಹಿವಾಟಿನ ಸಂಖ್ಯೆ H-21/2015-16 ದಿನಾಂಕ:4-6-2010 ಅನ್ನು ಗ್ರಾಮಲೆಕ್ಕಾಧಿಕಾರಿಗಳು 18–ಹುಲಿಕುಂಟೆ ಇವರು ಹಕ್ಕುಬದಲಾವಣೆ ಸಂಖ್ಯೆ ಎಂ.ಆರ್ ಸಂಖ್ಯೆ H-6/2015-16 ದಿನಾಂಕ:4-6-2010 ದಾಖಲಿಸಿಕೊಂಡು ಸಂಬಂಧಿಸಿದವರಿಗೆ ನಮೂನೆ–21 ನೋಟೀಸನ್ನು ಜಾರಿಗೊಳಿಸಲಾಗಿ ನಿಗದಿತ 30 ದಿವಸಗಳ ಒಳಗಾಗಿ ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಬಂದಿರುವುದಿಲ್ಲ. ಆದರೆ ಸದ್ರಿ ಕ್ರಯಯಾಗಿರುವ 18–ಹುಲಿಕುಂಟೆ ಗ್ರಾಮದ ಸ.ನಂ. 215/P2 ವಿಸ್ತೀರ್ಣ 6.50 ಮತ್ತು ಸ.ನಂ. 236/P21 ವಿಸ್ತೀರ್ಣ 0.50 ಎಕರೆ ಜಮೀನುಗಳು ಜಿಲ್ಲಾಧಿಕಾರಿಗಳು ಬಳ್ಳಾರಿ ಇವರ ಅಧಿಕೃತ ಜ್ಞಾಪನ ನಡವಳಿಕೆ ಸಂ.ಕಂ.ಭೂಪ/120/2008–09 ದಿನಾಂಕ: 12–01–2009 ರ ಪ್ರಕಾರ ಭೂಪರಿವರ್ತನೆಯಾದ ಕಾರಣ ಗೈರುಮಂಜೂರು ಮಾಡಿ ಮುಂದಿನ ಕ್ರಮಕ್ಕಾಗಿ ಗ್ರಾಮಲೆಕ್ಕಾಧಿಕಾರಿಗಳು 18–ಹುಲಿಕುಂಟೆ ಇವರು ಈ ಕಾರ್ಯಾಲಯಕ್ಕೆ ದಿನಾಂಕ:22–4–2016 ರಂದು ಕಡತವನ್ನು ಸಲ್ಲಿಸಿದ್ದು ಇರುತ್ತದೆ.

ಪ್ರಯುಕ್ತ ಸದ್ರಿ ಪ್ರಕರಣವನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ಹಾಗೂ 129 ರಡಿ ದಾಖಲಿಸಿಕೊಂಡು ಉಭಯರಿಗೆ ಹೇಳಿಕೊಳ್ಳುವ ಅವಕಾಶನೀಡಿ, ಉಭಯರಿಗೆ ವಿಚಾರಣೆಗೆ ಹಾಜರಾಗಲು ದಿನಾಂಕ:22–04–2016 ರಲ್ಲಿ ನಮೂನೆ–21 ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ: 25–04–2016 ರಂದು ಪ್ರಾರಂಭಿಸಿ ದಿನಾಂಕ:16–05–2016 ರಂದು ಮುಕ್ತಾಯಗೊಳಿಸಲಾಯಿತು.

ಪ್ರತಿವಾದಿ–2 ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್, ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್ ಸಂಡೂರು ಇವರ ಪರವಾಗಿ ಶ್ರೀ.ಗುಲಾಬಖಾನ ತಂದೆ.ರೋಷನ್‌ಖಾನ್ ಇವರು ದಿನಾಂಕ:16–05–2016 ರಂದು ಹಾಜರಾಗಿ 18–ಹುಲಿಕುಂಟೆ ಗ್ರಾಮದ ಸ.ನಂ. 215/P2 ವಿಸ್ತೀರ್ಣ 6.50 ಮತ್ತು ಸ.ನಂ. 236/P21 ವಿಸ್ತೀರ್ಣ 0.50 ಎಕರೆ ಜಮೀನುಗಳು ಶ್ರೀ.ಲಿಂಗರಾಜ ಸಾಹುಕರ ತಂದೆ.ಶ್ರೀ.ಸಿದ್ರಾಮಪ್ಪ ಸಾಹುಕರ, ಸಂತೆ ಕಲ್ಲೂರು ಗ್ರಾಮ, ಲಿಂಗಸೂರು ತಾಲ್ಲೂಕು ಇವರ ಹೆಸರಿಗೆ ಇರುವ ಸದ್ರಿ ಜಮೀನುಗಳು ಉಪನೊಂದಣಾಧಿಕಾರಿಗಳು, ಸಂಡೂರು ಇವರ ಡಾಕುಮೆಂಟ್ರ ಸಂ.172/2010–11 ದಿನಾಂಕ:04–06–2010 ರ ಪ್ರಕಾರ ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್, ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್ ಸಂಡೂರು ಇವರ ಪರವಾಗಿ ಕ್ರಯಕ್ಕೆ ಹೊಂದಿದ್ದು, ಆದರಂತೆ ಹಕ್ಕುಬದಲಾವಣೆ ಮಾಡಲು ಕೋರಿದ್ದು ಇರುತ್ತದೆ.

P.T.O

66

ವಾದಿ-1 ಶ್ರೀ.ಲಿಂಗರಾಜ ಸಾಹುಕರ ತಂದೆ.ಶ್ರೀ.ಸಿದ್ರಾಮಪ್ಪ ಸಾಹುಕರ, ಸಂತೆ ಕಲ್ಲೂರು ಗ್ರಾಮ, ಲಿಂಗಸೂರು ತಾಲ್ಲೂಕು ಇವರು ದಿನಾಂಕ:16-5-2016ರಂದು ಹಾಜರಾಗಿ 18-ಹುಲಿಕುಂಟೆ ಗ್ರಾಮದ ಸ.ನಂ. 215/P2 ವಿಸ್ತೀರ್ಣ06.50 ಮತ್ತು ಸ.ನಂ. 236/P21 ವಿಸ್ತೀರ್ಣ 0.50ಎಕರೆ ಜಮೀನುಗಳು ತನ್ನ ಹೆಸರಿಗೆ ಪಟ್ಟಾ ಇದ್ದು, ಈಗ ಸದ್ರಿ ಜಮೀನುಗಳನ್ನು ಉಪನೊಂದಣಾಧಿಕಾರಿಗಳು, ಸಂಡೂರು ಇವರ ಡಾಕುಮೆಂಟ್ರ ಸಂ.172/2010-11 ದಿನಾಂಕ:04-06-2010 ರ ಪ್ರಕಾರ ವಾದಿ-2 ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್, ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್ ಸಂಡೂರು ಇವರಿಗೆ ಖಂಡಿತ ಕ್ರಯಕ್ಕೆ ಮಾರಾಟ ಮಾಡಿದ್ದು ಅದರಂತೆ ಸದ್ರಿ ಜಮೀನುಗಳು ಸದ್ರಿಯವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ನನ್ನದೇನು ಅಭ್ಯಂತರವಿರುವುದಿಲ್ಲವೆಂದು ಹೇಳಿಕೆ ಸಲ್ಲಿಸಿದ್ದು ಇರುತ್ತದೆ. ಹಾಗೂ ಪ್ರತಿವಾದಿ ಕಂದಾಯ ನಿರೀಕ್ಷಕರು ಸಂಡೂರು ಇವರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿ-1 ಶ್ರೀ.ಲಿಂಗರಾಜ ಸಾಹುಕರ ತಂದೆ.ಶ್ರೀ.ಸಿದ್ರಾಮಪ್ಪ ಸಾಹುಕರ, ಸಂತೆ ಕಲ್ಲೂರು ಗ್ರಾಮ, ಲಿಂಗಸೂರು ತಾಲ್ಲೂಕು ಇವರ ಮಾಲಿಕತ್ವ ಹೊಂದಿದ 18-ಹುಲಿಕುಂಟೆ ಗ್ರಾಮದ ಸ.ನಂ. 215/P2 ವಿಸ್ತೀರ್ಣ 6.50 ಮತ್ತು ಸ.ನಂ. 236/P21 ವಿಸ್ತೀರ್ಣ 0.50 ಎಕರೆ ಜಮೀನುಗಳಿಗೆ ಉಪನೊಂದಣಾಧಿಕಾರಿಗಳು, ಸಂಡೂರು ಇವರ ಡಾಕುಮೆಂಟ್ ಸಂ.172/2010-11 ದಿನಾಂಕ:04-06-2010 ರ ಪ್ರಕಾರ ವಾದಿ-2 ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್, ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್ ಸಂಡೂರು ಎಂಬುವರಿಗೆ ಮಾರಾಟ ಮಾಡಿರುತ್ತಾರೆ.

ಸದರಿ ವಿಷಯದಲ್ಲಿ ಕಂದಾಯ ಅಧಿಕಾರಿಗಳು ನೋಂದಾಯಿತಗೊಂಡ ದಾಖಲೆಗಳ ಆಧಾರದ ಹಿನ್ನಲೆಯಲ್ಲಿ ಹಕ್ಕು ಬದಲಾವಣೆ ಮಾಡುವಾಗ ಹಕ್ಕು ಬದಲಾವಣೆ ತಿರಸ್ಕರಿಸುವ ಅಧಿಕಾರ ಹೊಂದಿರುವುದಿಲ್ಲ ಇಂತಹ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ತಮ್ಮ ರಿಟ್ ಅರ್ಜಿ ಕ್ರಮ ಸಂಖ್ಯೆ 11323/2001/ ದಿನಾಂಕ : 17-04-2002 ರ ಮೂಲಕ (ILR 2002 KAR 4637 P.K Vasudevan vs Deputy Commissioner, Kodagu District, Kodagu) ಈ ಕೆಳಗಿನಂತೆ ಆದೇಶ ನೀಡಿರುತ್ತಾರೆ.

KARNATAKA LAND REVENUE ACT, 1964 (KARNATAKA ACT NO.12 OF 1964)-SECTION 128 AND 129-Write petitioner claming to be the son of Sri P.K.Kumaran challenged the mutation in favour of Respondent No.2 based on Registerd Will of late Sri P.K.Kumaran in repect of land survey No.69/11 measuring 2 acres of Srimangala Village, Virajpet Tq.Kodagu District. The appeal of the petitioner before the Asst.Commissionerfiled by the Respondents was allowed setting aside the order of the Assitant Commissioner. The contention of the petiotioner is that on the basis of disputed 'Will' no mutation could have been effected in favour of Respondent No.2. HELD: Meticulous reading of the provisions of Section 128 discloses the whenever a person aquiresright under the Registerd Document, the revenue authorities are bound to carry out mutation in accordance with the contents of Registerd Document….. The enquiry contemplated under Section 129 of the Karnataka Land Revenue Act Strictly in essence a summary enquiry. The Revenue authorities have no jurisdiction to adjudicate the title and rights of the parties….. The entry in khatedar columns is no proof of possession or title….. The entry of name in khatedar column carries a liability to pay the tax and it is not a document of title or ownership, It may be one of the incidences or corroborative fact to prove the ownership, but not a conclusive fact of proof of ownership. The authorities who have to act under Section 129 of the act have to go by the prima-facie material. In the instant case, the 2nd

(P.T.O)

64

Responent's acquisition of right evidently being under Registerd document, the entry of name of 2nd Respondent does not appear to be illegal and contrary to the privisions of Section 128 of the Act. It is open for the petitioner to vindicate his right before the Civil Court and subject to the result of the civil suit, mutation entries had to be confirmed or cancelled as the case may be.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಹಾಗೂ ವಾದಿ-1 ಶ್ರೀ.ಲಿಂಗರಾಜ ಸಾಹುಕರ ತಂದೆ.ಶ್ರೀ.ಸಿದ್ರಾಮಪ್ಪ ಸಾಹುಕರ, ಸಂತೆ ಕಲ್ಲೂರು ಗ್ರಾಮ, ಲಿಂಗಸೂರು ತಾಲ್ಲೂಕು ಇವರ ನೊಂದಾಯಿತ ಖರೀದಿ ಪತ್ರದ ಮೂಲಕ ತಮ್ಮ ಒಡೆತನದಲ್ಲಿರುವ ಜಮೀನುಗಳನ್ನು ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್, ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್ ಸಂಡೂರು ಇವರಿಗೆ ಮಾರಾಟ ಮಾಡಿರುವುದು ಸಾಬೀತಾಗಿರುವುದರಿಂದ ಈಕೆಳಗಿನಂತೆ ಆದೇಶಿಸಲಾಗಿದೆ.

ಸಂ.ಕಂ.ಪಹಣಿ/ಹ.ಬ.ವಿವಾದ/2/2016-17 ದಿನಾಂಕ:20-06-2016.

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ, ಸಂದರ್ಭ, ವಾಸ್ತವಾಂಶ ಮತ್ತು ಕಾರಣಗಳಿಂದಾಗಿ ಹಾಗೂ ನನಗೆ ಪ್ರದತ್ತವಾದ ಅಧಿಕಾರದಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರನಿಯಮ 129 ಹಾಗೂ ನಿಯಮ 42 ರಂತೆ ಸಂಡೂರು ತಾಲ್ಲೂಕು, ಸಂಡೂರು ಹೋಬಳಿ 18-ಹುಲಿಕುಂಟೆ ಗ್ರಾಮದ ಸ.ನಂ. 215/P2 ವಿಸ್ತೀರ್ಣ 6.50 ಮತ್ತು ಸ.ನಂ. 236/P21 ವಿಸ್ತೀರ್ಣ 0.50 ಎಕರೆ ಜಮೀನುಗಳ ಖಾತಾ ಬದಲಾವಣೆಯನ್ನು ಈ ಆದೇಶವನ್ನು ತಯಾರಿಸಿ ಗಣಕೀರಣಗೊಳಿಸಿಕೊಂಡು ಪರಿಶೀಲಿಸಿ ಉಪನೊಂದಣಾಧಿಕಾರಿಗಳು, ಸಂಡೂರು ಇವರ ಡಾಕುಮೆಂಟ್ ಸಂ.172/2010-11 ದಿನಾಂಕ:04-06-2010 ರನ್ವಯ ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್ ಇವರ ಪರವಾಗಿ ಡೈರೆಕ್ಟರ್ ಶ್ರೀ.ಮೋಹನ ಬಿ.ಎಂ. ತಂದೆ.ದಿ:ಭೀಮಾಜಿ ಎಂ.ಆರ್ ಸಂಡೂರು ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ತಯಾರಿಸಿ ಗಣಕೀಕರಣಗೊಳಿಸಿಕೊಂಡು ಪರಿಶೀಲಿಸಿ ದಿನಾಂಕ:20-06-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಸಂಡೂರು.

ಗೆ,

(1) ವಾದಿ ಹಾಗೂ ಪ್ರತಿವಾದಿಗಳಿಗೆ (ಗ್ರಾಮಲೆಕ್ಕಾಧಿಕಾರಿ 18-ಹುಲಿಕುಂಟೆ ಮುಖಾಂತರ)

(2) ಕಂದಾಯ ನಿರೀಕ್ಷಕರು, ಸಂಡೂರು ಇವರಿಗೆ ಸೂಕ್ತಕ್ರಮಕ್ಕಾಗಿ.

(3) ಗ್ರಾಮಲೆಕ್ಕಿಗರು 18-ಹುಲಿಕುಂಟ ಇವರಿಗೆ ಸೂಕ್ತಕ್ರಮಕ್ಕಾಗಿ.

(4) ಈಕಾಯಾಲಯದ ಗಣಕೀಕರಣ ವಿಭಾಗಕ್ಕೆ.